# IN THE COURT OF THE ADDL. SENIOR CIVIL JUDGE & JMFC., GUBBI

# OS - 238/2023

Witness present and duly sworn on : 23.02.2026.

Further cross Examination: by Counsel for Defendant No.1 and 2 :

ನಿಪಿ-1 ವಂಶವೃಕ್ಷವನ್ನು ಈ ದಾವೆಯ ಸಲುವಾಗಿ ಪಡೆದಿದ್ದೇನೆಂದರೆ ಸರಿಯಲ್ಲ. ದಿನಾಂಕಃ 13.05.2024 ರಂದು ನಿಪಿ-2 ದಾಖಲೆಯನ್ನು ಪಡೆದು ಸ್ಟಾಂಪ್ ಪೇಪರ್ ಪಡೆದಿರುತ್ತೇನೆಂದರೆ ಸರಿ. ನಿಪಿ-1 ಮತ್ತು 2 ದಾಖಲೆಗಳಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನರಸೇಗೌಡರವರಿಗೆ ಸರ್ಕಾರದ ಮೂಲಕ ನೀಡಿರುವ ನಿವೇಶನಗಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಮತ್ತು 4 ನರಸೇಗೌಡರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಅವರ ಮರಣದ ನಂತರ ಸದರಿ ಆಸ್ತಿಗಳು 1 ನೇ ಪ್ರತಿವಾದಿ ಸುಜಾತ ರವರ ಹೆಸರಿಗೆ ವರ್ಗಾವಣೆ ಆಗಿವೆ ಎಂದರೆ ನನ್ನ ತಂದೆ ಮೊದಲು ಮರಣ ಹೊಂದಿರುವ ಕಾರಣ ಮತ್ತು ನರಸೇಗೌಡರವರ ಹೆಂಡತಿಯ ಹೆಸರಿಗೆ ವರ್ಗಾವಣೆ ಮಾಡಲು ಆಗಿದಿರುವ ಕಾರಣ 1 ನೇ ಪ್ರತಿವಾದಿಯ ರವರ ಹೆಸರಿಗೆ ಬಂದಿರುತ್ತದೆ. ದಿನಾಂಕಃ 10.09.2022 ರಂದು ನರಸೇಗೌಡ ರವರು ಮರಣ ಹೊಂದಿರುತ್ತಾರೆ. ನರಸೇಗೌಡ ರವರ ಹೆಂಡತಿ ರತ್ನಮ್ಮ ರವರು 2013 ರಲ್ಲಿ ಮರಣ ಹೊಂದಿರುತ್ತಾರೆ. ನರಸೇಗೌಡರ ಮರಣದ ಮೊದಲು ರತ್ನಮ್ಮ ರವರು ಮರಣ ಹೊಂದಿದ್ದರು ಎಂದರೆ ಸರಿ. ರತ್ನಮ್ಮ ರವರಿಗೆ ಸುಜಾತ ಎಂಬ ಒಬ್ಬಳೇ ಮಗಳು ಎಂದರೆ ಅವರಿಗೆ ಸುಜಾತ ಮತ್ತು ಪ್ರಣಯ್ ಎಂಬ ಎರಡು ಮಕ್ಕಳು. ರತ್ನಮ್ಮ ನವರಿಗೆ ಸುಜಾತ ರವರನ್ನು ಹೊರತುಪಡಿಸಿ ಪ್ರಣಯ್ ಎಂಬ ಮಗ ಇರಲಿಲ್ಲ ಎಂದರೆ ರತ್ನಮ್ಮ ರವರು ನರಸೇಗೌಡ ರವರ ಮೊದಲನೆ ಹೆಂಡತಿ ಮತ್ತು ನನ್ನ ತಾಯಿ ಜಯಮ್ಮ ರವರ 2 ನೇ ಹೆಂಡತಿ. ನರಸೇಗೌಡ ರವರಿಗೆ ರತ್ನಮ್ಮ ರವರು ಮೊದಲನೆ ಹೆಂಡತಿ ಆಗಿರುವ ಕಾರಣ ಅವರಿಗೆ 2 ನೇ ಮದುವೆ ಆಗುವ ಅವಶ್ಯಕತೆ ಇರಲಿಲ್ಲ

ಎಂದರೆ ಒಂದು ಮಗು ಇರದೆ ಇದ್ದ ಕಾರಣ ಅವರ ಸಹೋದರರೊಂದಿಗೆ ಮಾತನಾಡಿ 2 ನೇ ಮದುವೆ ಆಗಿರುತ್ತಾರೆ.

ದಾವಾ ಐಟಂ ನಂ.1 ಮತ್ತು 2 ಆಸ್ತಿಗಳ ಮಾರಾಟದ ನಂತರ ಖರೀದಿ ದಾರರಾದ 3 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ಸರಿ. ಅಂದಿನಿಂದ ಅವರು 3 ಮತ್ತು 4 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ 4 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆಗಿದೆ. ದಾವಾ ಐಟಂ ನಂ.4 ಆಸ್ತಿಯು ಗಂಗಮ್ಮ ರವರು ಅವರ ಮಗಳಾದ ರತ್ನಮ್ಮ ರವರ ಹೆಸರಿಗೆ ಮಾಡಿರುತ್ತಾರೆ. ರತ್ನಮ್ಮ ರವರು ಸದರಿ ಆಸ್ತಿಯ ಸ್ವಾಧೀನದಲಿ ಇದ್ದಾರೆ ಎಂದರೆ ಸರಿ. ದಿನಾಂಕಃ 22.11.2019 ಕ್ರಯಪತ್ರವು ಮತ್ತು 4 ನೇ ಪ್ರತಿವಾದಿ ಗೋವಿಂದರಾಜು ರವರ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳು ನಮ್ಮ ಗಮನಕ್ಕೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯ ಮರಣದ ನಂತರ ತಿಳಿದಿರುತ್ತದೆ.

ಸುಮಾರು 2-3 ಬಾರಿ ಭಾಗ ಕೋರಿ ನ್ಯಾಯ ಪಂಚಾಯ್ತಿ ಆಗಿರುತ್ತದೆ. ಈ ದಾವೆಯನ್ನು ಹಾಕುವ 1-2 ವರ್ಷ ಪೂರ್ವದಲ್ಲಿ ಭಾಗ ಕೇಳಿದ್ದೇವೆ. ಅದರ ನಂತರ ಈ ದಾವೆಯನ್ನು ಸಲ್ಲಿಸುವ ತನಕ ಯಾವುದೇ ಕ್ರಮ ವಹಿಸಲಿಲ್ಲ ಎಂದರೆ ಸರಿ. ವಾದಿಗಳಿಗೆ ಮತ್ತು 1 ನೇ ಪ್ರತಿವಾದಿ ಸುಜಾತ ಹಾಗೂ ಅವರ ತಂದೆ ನರಸೇಗೌಡರವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಆದರೆ ದಾವಾ ಆಸ್ತಿಗಳನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ.

**<u>Re examination – Nil.</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi